(*b*) Acquisition of land is under progress. In the meanwhile possession of land measuring 5.26 acres has been taken on 21-5-80.

(*c*) Plans and Estimates are being prepared. Construction will be taken up soon after plans and estimates are approved by the E.S.I. Corporation, New Delhi.

ಶ್ರೀಮತಿ ನಾಗಮ್ಮ ಕೇಶವಮೂರ್ತಿ.— ದಾವಣಗೆರೆಯಲ್ಲಿ ಇ. ಎಸ್. ಐ. ಆಸ್ಪತ್ರೆ ಕಟ್ಟುವ ಸಲುವಾಗಿ ೧೯೭೨ ರಿಂದಲೂ ಭೂಸ್ವಾಧೀನದ ಪ್ರಶ್ನೆ ಬಂದಿತ್ತು, ಕೇಂದ್ರ ಮತ್ತು ರಾಜ್ಯದ ಸಂಬಂಧ ಪಟ್ಟ ಅಧಿಕಾರಿಗಳು ನಾಲ್ಕೈದು ಸಲ ಅಲ್ಲಿಗೆ ಬಂದು ಸ್ಥಳ ಪರಿಶೀಲನೆ ಮಾಡಿದ್ದಾರೆ. ಈಗ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಬಹಳ ಸಂತೋಷ. ಆದರೆ, ದೆಹಲಿಯ ಇ. ಎಸ್. ಐ. ನಿಗಮದವರಿಂದ ನಕ್ಷೆಗಳ ಹಾಗೂ ಅಂದಾಜು ಪೆಚ್ಚಕ್ಕೆ ಅನುಮತಿ ದೊರೆತ ಕೂಡಲೇ ಕಟ್ಟಡದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದೆಂದು ಮಾನ್ಯ ಸಚಿವರು ಹೇಳಿದ್ದಾರೆ. ಕಳೆದ ಎಂಟು-ಹತ್ತು ವರ್ಷಗಳಿಂದ ಈ ಆಸ್ಪತ್ರೆಯ ಪ್ರಶ್ನೆ ಹಾಗೇ ಉಳಿದಿರುವುದರಿಂದ ಈ ವರ್ಷದಲ್ಲೇ ನಕ್ಷೆ ಮತ್ತು ಅಂದಾಜನ್ನು ಮಂಜೂರು ಮಾಡಿಸಿ ಕಟ್ಟಡದ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನಿಸುವಿರಾ ?

ಶ್ರೀ ಸಿ. ಎಂ. ಇಬ್ರಾಹಿಂ.—ಪರಿಶೀಲಿಸುತ್ತೇನೆ.

ಶ್ರೀಮತಿ ನಾಗಮ್ಮ ಕೇಶವಮೂರ್ತಿ.— ದಾವಣಗೆರೆಯಲ್ಲಿ ಸುಮಾರು ಇಪ್ಪತ್ತು ಸಾವಿರದಷ್ಟು ಕಾರ್ಮಿಕರಿದ್ದಾರೆ. ಐವತ್ತು ಹಾಸಿಗೆಯ ಆಸ್ಪತ್ರೆಯನ್ನು ಅಲ್ಲಿ ನಿರ್ಮಿಸುವ ಸೂಚನೆ ಇದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಅಲ್ಲಿ ಕಾರ್ಮಿಕರು ಹೆಚ್ಚು ಸಂಖ್ಯೆಯಲ್ಲಿರುವುದರಿಂದ ನೂರು ಹಾಸಿಗೆಯ ಆಸ್ಪತ್ರೆಯನ್ನು ಕಟ್ಟಿಸಬೇಕಾದುದು ಬಹಳ ಅವಶ್ಯಕವೆಂದು ಹೇಳುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಅಲ್ಲಿ ಇಪ್ಪತ್ತು ಸಾವಿರ ಕಾರ್ಮಿಕರಿರಬಹುದು. ಆದರೆ, ಇ.ಎಸ್.ಐ. ಯೋಜನೆಯಡಿ ಬರತಕ್ಕವರು ಸುಮಾರು ೧೨,೬೦೦ ಕಾರ್ಮಿಕರು ಮಾತ್ರ ಇರುತ್ತಾರೆ. ಒಂದು ಸಾವಿರ ಕಾರ್ಮಿಕರಿಗೆ ನಾಲ್ಕು ಹಾಸಿಗೆ ಇರಬೇಕೆಂಬ ನಿಯಮ ಸಹ ಇದೆ. ಈಗ ತಾತ್ಕಾಲಿಕವಾಗಿ ಐವತ್ತು ಹಾಸಿಗೆ ಆಸ್ಪತ್ರೆಗೆ ಅವಕಾಶವಿದೆ. ಉಳಿದ ಕಾರ್ಮಿಕರನ್ನೂ ಸೇರಿಸಿಕೊಳ್ಳಬೇಕೆಂದು ಮಾನ್ಯ ಸದಸ್ಯರು ಹೇಳುವುದಾದರೆ, ಇದನ್ನು ವಿಸ್ತರಣಾ ಯೋಜನೆಯಲ್ಲಿ ಸೇರಿಸಿ ನೂರು ಹಾಸಿಗೆ ಆಸ್ಪತ್ರೆಯನ್ನಾಗಿ ಮಾಡಬಹುದು.

ಶ್ರೀಮತಿ ನಾಗಮ್ಮ ಕೇಶವಮೂರ್ತಿ. - ಸ್ವಾಮಿ, ೫ ಎಕರೆ ೨೦ ಗುಂಟೆ ಜಮೀನನ್ನು ಸ್ವಾಧೀನ ಪಡಿಸಿಕೊಂಡಿದ್ದೇವೆಂದು ಉತ್ತರದಲ್ಲಿ ಹೇಳಿದ್ದೀರಿ. ೧೦೦೦ ಬೆಡ್ ಇರತಕ್ಕ ದಾವಣಗೆರೆ ಜನರಲ್ ಆಸ್ಪತ್ರೆ ಏನಿದೆ, ಅದರ ಪಕ್ಕದಲ್ಲಿಯೇ ಜಮೀನನ್ನು ಸ್ವಾಧೀನ ಪಡಿಸಿಕೊಂಡರೆ ಜನರಲ್ ಆಸ್ಪತ್ರೆಯಲ್ಲಿರತಕ್ಕ ತಜ್ಞ ವೈದ್ಯರಂ ಇ ಎಸ್.ಐ. ಆಸ್ಪತ್ರೆಗೆ ಹೋಗಿ ಅವರ ಸೇವೆಯನ್ನು ಸಲ್ಲಿಸುವುದಕ್ಕೆ ಅನುಕೂಲವಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಜಾಗವನ್ನು ಸ್ವಾಧೀನಪಡಿಸಿಕೊಂಡಿದ್ದೀರಾ ?

ಶ್ರೀ ಸಿ. ಎಂ. ಇಬ್ರಾಹಿಂ.—ಅದಕ್ಕೆ ಸಂಬಂಧಪಟ್ಟಂತ ಸಮಿತಿ ಇದೆ. ಅಧಿಕಾರಿಗಳು ಮತ್ತು ಸಮಿತಿಯವರು ಪರಿಶೀಲನೆ ಮಾಡಿ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾರೆ.

Minimum Wages to Power Loom Weavers and Workers

824 SRI V. V. PATTAR (Jamkhandi) —Will the Minister for Labour, Small Scale Industries, Food and Wakfrs be pleased to state :—

(*a*) whether it is a fact that the power loom owners are not paying minimum wages to power loom weavers and workers ;

(*b*) if so, whether Government is going to take any steps to enforce the payment as per the Minimum Wages Act ?

SRI C. M. IBRAHIM (Minister for Labour, Small Scale Industries, Food and Wakfs).—

(*a*) Yes.

(*b*) (i) Government Notification No. SWL 118 LMW 79 dated 22-11-1979, fixing minimum wages for employments in Cotton Textiles including Power Loom has been stayed on 24-4-1980 by the High Court of Karnataka in their interim order in Writ Petition No. 6823/1980. Hence, implementation of the minimum wages will be possible only after the vacation of the stay order.

(ii) As regards implementation of the orders fixing minimum wages for employment in Silk Industry including Power Loom, instructions have been issued to the concerned Officer to implement the same.

ಶ್ರೀ ವಿ. ವಿ. ಪತ್ತಾರ್.—ವಿದ್ಯುತ್ ಮಗ್ಗದ ಮಾಲೀಕರುಗಳು ಸರ್ಕಾರ ನಿಗದಿ ಮಾಡಿರುವಂತ ಕನಿಷ್ಟ ವೇತನವನ್ನು ವಿದ್ಯುತ್ ಮಗ್ಗದ ನೇಕಾರರಿಗೆ ಮತ್ತು ಕೆಲಸಗಾರರಿಗೆ ಕೊಡದೇ ಇರುವುದಕ್ಕೆ ಕಾರಣವೇನು ? ಈ ಕಾನೂನನ್ನು ತೀವ್ರಾಸಕ್ತಿಯಿಂದ ಜಾರಿಗೆ ತರುವುದರಲ್ಲಿ ಸರ್ಕಾರದ ನಿಲುವೇನು ?

ಶ್ರೀ ಸಿ. ಎಂ. ಇಬ್ರಾಹಿಂ.—ವಿದ್ಯುತ್ ಮಗ್ಗದ ಮಾಲೀಕರನ್ನು ಕಾರ್ಮಿಕ ಪ್ರತಿನಿಧಿಗಳನ್ನು ಕರೆಸಿ ಳ ಸಾರಿ ಚರ್ಚೆ ನಡೆಸಲಾಗಿದೆ. ಮಾಲೀಕರು ಕನಿಷ್ಟ ವೇತನ ಕೊಡುವುದಕ್ಕಾಗುವುದಿಲ್ಲವೆಂದು ಹೇಳು ತ್ತಾರೆ, ಸರ್ಕಾರ ಕನಿಷ್ಟ ವೇತನ ಮಸೂದೆಯನ್ನು ಪಾಪಸ್ಸು ತೆಗೆದುಕೊಳ್ಳುವುದಿಲ್ಲ. ಮಿನಿಮಮ್ ವೇಜಸ್ ಕೊಡದೇ ಇರತಕ್ಕವರ ಮೇಲೆ ಕೇಸ್ ಕೂಡ ಹಾಕಲಾಗುತ್ತಿದೆ.

ಶ್ರೀ ವಿ. ವಿ. ಪತ್ತಾರ್.—ಸ್ವಾಮಿ, ಬರೀ ಕೇಸುಗಳನ್ನು ಹಾಕುವುದರಿಂದ ಏನೂ ಅರ್ಥವಿಲ್ಲ. ಸರ್ಕಾರ ಕಾಯಿದೆ ತಂದಮೇಲೆ ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಲ್ಲಿ ತಕ್ಕ ಕ್ರಮ ತೆಗೆದುಕೊಳ್ಳ ಬೇಕು. ಬೆಳಗಾಂನಲ್ಲಿ ಸುಮಾರು ೨೫,೦೦೦ ಜನ ವಿದ್ಯುತ್ ಮಗ್ಗದ ಕಾರ್ಮಿಕರು ಕಳೆದ ೨ ತಿಂಗಳಿಂದ ಉಪವಾಸವಿದ್ದಾರೆ. ಇದರ ಸಲುವಾಗಿ ಪರಿಣಾಮಕಾರಿಯಾದ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಸಿ. ಎಂ. ಇಬ್ರಾಹಿಂ.—ಕೇಸ್ ಹಾಕಬಾರದು ಎಂದರೆ ಇನ್ನೇನು ಮಾಡುವುದಕ್ಕೆ ಆಗುತ್ತದೆ ? ಹಳ್ಳಿ ಪಂಚಾಯಿತಿ ಮಾಡಿ ಹಿಡಿದಂಕೊಂಡು ಹೊದರೆ ತೀರ್ಮಾನವಾಗುತ್ತದೆಯೆ ?

ಅಧ್ಯಕ್ಷರು.—ಈಗ ಅದೆಲ್ಲಾ ನಡೆಯೋದಿಲ್ಲ.

ಶ್ರೀ ಸಿ. ಎಂ. ಇಬ್ರಾಹಿಂ.—ಕಾರ್ಮಿಕರು ಎಷ್ಟು ಜನ ಇದ್ದಾರೋ ? ಅಷ್ಟೇ ಜನ ಮಾಲೀಕರು ಇದ್ದಾರೆ. ಬೆಳಗಾಂ ಜಿಲ್ಲೆಯ ಎಲ್ಲಾ ಶಾಸಕರನ್ನು ಕರೆಸಿ ಪಂತ್ಕೊಂದು ಸಭೆ ನಡೆಸಿ ಪಯಾಮೀಡಿಯಾ ಅಂಡರ್‌ಸ್ಟ್ಯಾಂಡಿಂಗ್ ಮೇಲೆ ಜಂಟ್ಲಮೆನ್ಸ್ ಅಗ್ರಿಮೆಂಟ್ ಮಾಡಿ ಒಂದು ತೀರ್ಮಾನ ಮಾಡುವುದಕ್ಕೆ ಪ್ರಯತ್ನ ಮಾಡೋಣ.

SRI A. LAKSHMISAGAR.—I should like know from the Hon. Minister what role was played by Sri Pattar when he was holding the same port-folio, in respect of this powerloom problem.

ಶ್ರೀ ಸಿ. ಎಂ. ಇಬ್ರಾಹಿಂ.—ನಾನು ಉತ್ತರ ಕೊಡುವ ಸ್ಟೇಜ್‌ನಲ್ಲಿ ಇಲ್ಲ.

SRI B. B. SAYANAK.—When the notification regarding the Minimum Wages Act was issued, Sri Devaraj Urs was the Chief Minister and Sri Pattar was holding the port-folio of opwerlooms. There is a loophole regarding the art silk-cum-cotton wages. They have not mentioned it. That is why there is a tussle. I would like to know from the Hon'ble Minister whether it is a fact that there is a loophole in this notification.

ಶ್ರೀ ಸಿ. ಎಂ. ಇಬ್ರಾಹಿಂ.—ಸ್ವಾಮಿ, ಈಗ ಸ್ವಲ್ಪ ಲೂಪೋಲ್ ಇದೆ. ನೋಟೀಸ್ ಆಗ ಬೇಕಾಗಿದ್ದರೆ ಶಾಸಕರ ಸಲಹೆ ಕೇಳಿ ತೀರ್ಮಾನಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸರ್ಕಾರ ಈ ಬಿಲ್‌ನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ. ಪುನರ್-ವಿಮರ್ಶೆ ಮಾಡುವಂತಾದ್ದು ಸರ್ಕಾರದ ಮುಂದೆ. ಇಲ್ಲ.

ಶ್ರೀ ವಿ. ವಿ. ಪತ್ತಾರ್.—ಬನಹಟ್ಟಿ ಒಂದರಲ್ಲಿಯೇ ವಿದ್ಯುತ್ ಮಗ್ಗದ ಕೆಲಸಗಾರರು ಸುಮಾರು ೧೦,೦೦೦ ಜನ ಇದ್ದಾರೆ. ಕಾರ್ಮಿಕರಿಗೆ ಸಂಬಂಧಪಟ್ಟ ಎಲ್ಲಾ ಕಾನೂನುಗಳಿಗೂ ಫ್ಯಾಕ್ಟರಿಯವರು ಹೋಗಿ ಹೈಕೋರ್ಟಿನಿಂದ ಸ್ಟೇ ಮಾಡಿದ್ದಾರೆ. ಗೌರ್ನಮೆಂಟ್ ಇಸವಿಯಲ್ಲಿ ಬಾಂಬೆ ಟೆಕ್ಸ್‌ಟೈಲ್ ಕಮೀಷನರ್ ಆರ್ಡರ್ ಪ್ರಕಾರ ನೇಕಾರರಿಗೆ ಪ್ರೊಟೆಕ್ಷನ್ ಕೊಡಬೇಕೆಂದು ಇತ್ತು; ಅದರ ಬಗ್ಗೆ ಕೂಡ ಸ್ಟೇ ಮಾಡಿಸಿದ್ದಾರೆ. ಕಳೆದ ಹತ್ತಾರು ವರ್ಷಗಳಿಂದ ಲಿಟಿಗೇಷನ್ ನಡೆಯುತ್ತಲೇ ಇದೆ. ಕೇಸುಸ್ ಪೆಂಡಿಂಗ್ ಇದೆ. ಸರ್ಕಾರ ಇತ್ತಕಡೆ ತೀವ್ರ ಗಮನಕೊಟ್ಟು, ಕಾನೂನು ಇಲಾಖೆಯಿಂದ ಪರಿಶೀಲನೆ ಮಾಡಿಸಿ ಎಲ್ಲ ರೀತಿಯ ಸ್ಟೇ ಆರ್ಡರುಗಳನ್ನು ರದ್ದು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಸಿ. ಎಂ. ಇಬ್ರಾಹಿಂ.—ಈಗಾಗಲೇ ಸರ್ಕಾರ ಅಡ್ವೋಕೇಟ್ ಜನರಲ್‌ರವರ ಮುಖಾಂತರ ಪ್ರಯತ್ನ ನಡೆಯುತ್ತಿದೆ.

ಶ್ರೀ ಬಿ. ಬಸವಲಿಂಗಪ್ಪ.—ಕೇಂದ್ರ ಸರ್ಕಾರದವರು ಕನಿಷ್ಟ ವೇತನ ಕೊಡುವ ಬಗ್ಗೆ ನೋಟಿಫಿಕೇಷನ್ ಮಾಡಿದ್ದಾರೆಯೆಂದು ಕೇಳಿದ್ದೇನೆ. ನಿಜವೆ ? ಹಾಗಿದ್ದರೆ, ಅದರ ಕಾಂಟೆಂಟ್ಸ್ ಏನು ?

ಶ್ರೀ ಸಿ. ಎಂ. ಇಬ್ರಾಹಿಂ.—ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ —ಗಮನಕ್ಕೆ ಬಂದಿಲ್ಲ ಅಂತ ಹೇಳಿಬೇಡಿ; ಇದೆ. ಕೇಂದ್ರ ಸರ್ಕಾರ ದವರು ನಿಗದಿ ಮಾಡಿರತಕ್ಕ ಕನಿಷ್ಟವೇತನದ ಕಾನೂನನ್ನು ಜಾರಿಗೆ ತರತಕ್ಕಂಥಾ ರಾಜ್ಯ ಸರ್ಕಾರದ ಕರ್ತವ್ಯ. ಅದು ಇದೆಯೋ ? ಇಲ್ಲವೋ ? ಇದ್ದಿದ್ದರೆ ಕಾರ್ಯಗತ ಮಾಡಂತ್ತೀರಾ ?

ಶ್ರೀ ಜಿ. ಕೆ. ತಕ್ಕೇದ್.—ಅಧ್ಯಕ್ಷರೇ, ಕನಿಷ್ಟ ವೇತನ ಕಾನೂನಿನ ಪ್ರಕಾರ ಬೆಂಗಳೂರು ಮತ್ತು ಬೆಳಗಾಂ ನೇಕಾರರಿಗೆ ವ್ಯತ್ಯಾಸ ಇದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಇಡೀ ರಾಜ್ಯಕ್ಕೆ ಒಂದೇ ರೀತಿಯಾದಂತ ಕನಿಷ್ಟ ವೇತನವನ್ನು ನಿಗದಿ ಮಾಡಿದರೆ ನೇಕಾರರಲ್ಲಿ ಹಾಗೂ ಮಾಲೀಕರಲ್ಲಿ ಒಂದು ರೀತಿಯ ಸಮನ್ವಯ— ಭಾವನೋಭಾವನೆ ಬರುತ್ತದೆಂಬುದು ನಿಜವಲ್ಲವೆ ? ಈ ದೃಷ್ಟಿಯಿಂದ ಕನಿಷ್ಟ ವೇತನ ಮಸೂದೆಯನ್ನು ತಿದ್ದುಪಡಿ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಸಿ. ಎಂ. ಇಬ್ರಾಹಿಂ.—ಅಧ್ಯಕ್ಷರೆ, ಸರ್ಕಾರ ಒಂದು ಸಾರಿ ನೋಟಿಫಿಕೇಷನ್ ಅಂಗೀಕರಿಸಿದೆ. ಹಿಂದೆ ಇದ್ದ ಸರ್ಕಾರ ಮಿನಿಮಮ್ ವೇಜಸ್ ಆ್ಯಕ್ಟ್ ಜಾರಿಗೆ ತಂದಿದೆ. ಅವರು ನೋಟಿಫಿಕೇಷನ್ ಮಾಡಬೇಕಾದರೆ ಆರ್ಟ್ ಸಿಲ್ಕ್ ರಾ ಸಿಲ್ಕ್ ಬಗ್ಗೆ ವಿಚಾರ ಮಾಡಬೇಕಾಗಿತ್ತು. ಈಗ ಅಲ್ಲಿರತಕ್ಕ ಮಾಲೀಕರು, ಕಾರ್ಮಿಕರು, ಆ ಭಾಗದಲ್ಲಿರತಕ್ಕ ಎಲ್ಲಾ ಶಾಸಕರು ಒಂದು ಸಾರಿ ಇದನ್ನು ಪುನರ್ ಪರಿಶೀಲನೆ ಮಾಡಿ ಅಂತ ಜಾಯಿಂಟ್ ಆಗಿ ಬರೆದರೆ ಆಗ ಸರ್ಕಾರ ಪರಿಶೀಲನೆ ಮಾಡುತ್ತದೆ. ಈಗ ಮಿನಿಮಮ್ ವೇಜಸ್ ಆ್ಯಕ್ಟ್ ಪುನರ್ ಪರಿಶೀಲನೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ವಿ. ವಿ. ಪತ್ತಾರ್.—ಅಧ್ಯಕ್ಷರೆ, ಮಾನ್ಯ ತೆಕ್ಕಡ್ ಅವರು ಒಂದು ಮಾತನ್ನು ಹೇಳಿದರು. ಬೆಳಗಾವಿ ನೇಕಾರರ ಸಲುವಾಗಿ ಕನಿಷ್ಟ ವೇತನ ನಿಗಧಿ ಮಾಡಿದ್ದಾರೆ. ಅದು ಟೈಮ್ ರೇಟ್ ಪ್ರಕಾರ ಮಾಡಿದ್ದು. ಅಲ್ಲಿ ಮಾಲೀಕರು ಏನು ಹೇಳುತ್ತಾರೆ ಎಂದರೆ ಅವರು ೮ ತಾಸು ಕೆಲಸ ಮಾಡದಿದ್ದರೆ

ನಮಗೆ ರೇಟು ಉಪಯೋಗವಿರುವುದಿಲ್ಲ ಅಂತ ಹೇಳುತ್ತಾರೆ. ಅಲ್ಲಿ ಕಾರ್ಮಿಕರು ಏನು ಹೇಳುತ್ತಾರೆ ಎಂದರೆ ಒಂದು ಮಿನಿಮಮ್ ಪ್ರೊಡಕ್ಷನ್ ಫಿಕ್ಸ್ ಮಾಡಿ, ನಾವು ಮಿನಿಮಮ್ ಪ್ರೊಡಕ್ಷನ್ ತೋರಿಸಲಿಕ್ಕೆ ಸಿದ್ಧರಿದ್ದೇವೆಂದು ಹೇಳುತ್ತಾರೆ. ಸರ್ಕಾರದವರು ಕಾರ್ಮಿಕರ ಧೋರಣೆಯನ್ನು ಕನ್ಸಿಡರ್ ಮಾಡಬೇಕು. ಇವೊತ್ತು ೮ ರಿಂದ ೧೧–೨೦ರ ವರೆಗೆ ಕನಿಷ್ಟ ವೇತನ ಇದೆ. ಬೆಲೆಗಳು ಏರುತ್ತಿರುವಾಗ ಕಾರ್ಮಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ. ಸಮಗ್ರವಾಗಿ ಮಾಲೀಕರು, ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಪವರ್ ಲೂಮ್ ಕಾರ್ಪೊರೇಷನ್ ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಈ ಸಮಸ್ಯೆಗಳನ್ನು ಸುಧಾರಿಸುವ ಸಲುವಾಗಿ ಒಂದು ಪವರ್ ಲೂಮ್ ಕಾರ್ಪೊರೇಷನ್ ಸ್ಥಾಪನೆ ಮಾಡುತ್ತೀರಾ ?

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಸದಸ್ಯರು ಮಿನಿಮಮ್ ವೇಜಸ್ ಆ್ಯಕ್ಟ್ ಜಾರಿಗೆ ತರದೇ ಇರುವ ಮಾಲೀಕರ ಮೇಲೆ ಕೇಸ್ ಹಾಕಲಿಕ್ಕೆ ಸರ್ಕಾರ ಏನಾದರೂ ವಿಚಾರ ಮಾಡುತ್ತಿದೆಯೇ ಅಂತ ಕೇಳಿದರು. ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಕೇಳತಕ್ಕ ಕಾಲದಲ್ಲಿ ಸಾಕಷ್ಟು ಡಿಸ್‌ಕಷನ್ ಆಗಿದೆ. ಆ ಹಿನ್ನೆಲೆಯಲ್ಲಿ ಕೇಳುತ್ತಿದ್ದಾರೆ. ಸರ್ಕಾರದ ವಿಚಾರದಲ್ಲಿ ಸಧ್ಯಕ್ಕಂತೂ ಇಲ್ಲ. ಇನ್ನು ಮುಂದೆ ಹ್ಯಾಂಡ್‌ಲೂಮ್ ಕಾರ್ಪೊರೇಷನ್ ಏನು ಇದೆ ಆವರ ಅಧಿಕಾರಿಗಳನ್ನು ಕರೆಸಿ, ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳನ್ನು ಕರೆಸಿ ಈ ವಿವಾದ ಏನಿದೆ ಇದು ಪರಿಹಾರ ಆಗದೇ ಇದ್ದರೆ ಶಾಸಕರನ್ನು ಕರೆಸಿ, ಪವರ್ ಲೂಮ್ ಕಾರ್ಪೊರೇಷನ್ ಮಾಡತಕ್ಕದ್ದು ಏನಿದೆ, ಇದನ್ನು ಸರ್ಕಾರ ಯಾವ ಹಂತದಲ್ಲಿ ಪ್ರಾರಂಭಿಸಬೇಕು ಆದನ್ನು ನೋಡಿ ಪರಿಶೀಲಿಸುತ್ತದೆ.

ಶ್ರೀ ವಿ. ವಿ. ಪತ್ತಾರ್.—ಅಧ್ಯಕ್ಷರೆ, ಕಾರ್ಮಿಕ ಮಂತ್ರಿಗಳು ಬಹಳವಾಗಿ ಆಸಕ್ತಿ ವಹಿಸಿ, ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ ಅದಕ್ಕೆ ನಾನು ಅಭಿನಂದಿಸುತ್ತೇನೆ. ಈ ಪವರ್ ಲೂಮ್ ಮಾಲೀಕರು ಬಣ್ಣ ತುಟ್ಟಿ ಆದರೆ, ನೂಲು ತುಟ್ಟಿ ಆದರೆ ಕೊಳ್ಳಲಿಕ್ಕೆ ಸಿದ್ಧರಿದ್ದಾರೆ. ಆದೇ ರೀತಿ ಕಾರ್ಮಿಕರಿಗೆ ವೇತನ ಏರಿಸುವುದು ಬೇಡವೇ ?

ಅಧ್ಯಕ್ಷರು.—ಅದು ಮಾನ್ಯ ಸದಸ್ಯರ ಅಭಿಪ್ರಾಯ ದಯಮಾಡಿ ಕುಳಿತುಕೊಳ್ಳಬೇಕು.

MR. SPEAKER.—Questions are over.

QUESTIONS FOR ANSWERS ON THE DAY
(but not taken up)

Reservation of Posts for SC & ST, Backward Class People and for religious minorities in Karnataka University

169. SRI M. GANGANNA (Kushtagi).—Will the Minister for Education be pleased to state :

(a) the total number of teachers belonging to Backward Class, Harijans, Girijans and Minority Communities in the teaching cadre of the Karnataka University ;

(b) whether it is a fact that the persons belonging to a particular community got maximum benefits ;

(c) if so, action intended to be taken by the Government so as to ensure that all communities get facilities as per the Government Orders ?